# ಈ ಹುಡುಗಿಯರು ಎಲ್ಲಿಗೆ ಹೋಗುತ್ತಾರೆ?

‘ಓದಿ ಕೆಲಸದಲ್ಲಿದ್ದರೆ ವರದಕ್ಷಿಣೆಯ ಭಾರ ಇಲ್ಲದೆ ಮಗಳನ್ನು ಮದುವೆ ಮಾಡಿಸಬಹುದು’ ಎನ್ನುವುದು ಪೋಷಕರ ದೂರಾಲೋಚನೆ. ಅರ್ಥ ಸ್ಪಷ್ಟ: ನಮ್ಮ ಸಮಾಜದಲ್ಲಿ ಹೆಣ್ಣಿನ ಪ್ರತಿಭೆಗೆ ಬೆಲೆ ಇಲ್ಲ. ಆಕೆ ಏನಿದ್ದರೂ ಮದುವೆಯಾಗಿ, ಸಂಸಾರದ ನೊಗ ಹೊತ್ತು, ಮಕ್ಕಳನ್ನು ಹೆತ್ತು ಮನೆಯಲ್ಲೇ ಇರಬೇಕಾದವಳು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳ ಫಲಿತಾಂಶ ಪ್ರಕಟವಾದಾಗ ಎಲ್ಲ ಪತ್ರಿಕೆಗಳಲ್ಲೂ, ಟೀವಿ ಮಾಧ್ಯಮಗಳಲ್ಲೂ ಮಿಂಚಿದವರು ಹುಡುಗಿಯರೇ. ‘ಈ ಸಲವೂ ಹುಡುಗಿಯರ ಮೇಲುಗೈ’ ಎನ್ನುವುದು ಸಮೂಹ ಮಾಧ್ಯಮಗಳ ಒಕ್ಕೊರಲ ಘೋಷಣೆ. ಎಸ್‌ಎಸ್‌ಎಲ್‌ಸಿ ಯಲ್ಲಿ ಪರೀಕ್ಷೆಗೆ ಕುಳಿತ ಬಾಲಕಿಯರಲ್ಲಿ ಶೇಕಡಾ 81.16ರಷ್ಟು ಮಂದಿ ತೇರ್ಗಡೆಯಾಗಿದ್ದರೆ, ಬಾಲಕರ ತೇರ್ಗಡೆ ಪ್ರಮಾಣ ಶೇಕಡಾ 71.73 ಮಾತ್ರ! ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯಧಿಕ ಅಂಕ ಗಳಿಸಿದವರೂ ಬಾಲಕಿಯರೇ. ಮೊದಲ ಸ್ಥಾನವನ್ನು ಕರಾವಳಿಯ ಬಾಲಕಿಯೊಬ್ಬಳು ಪಡೆದರೆ, ಎರಡನೇ ಸ್ಥಾನವನ್ನು ಸಮಾನ ಅಂಕ ಗಳಿಸಿದ ಮೂವರು ಬಾಲಕಿಯರೇ ಹಂಚಿಕೊಂಡರು. ಬಾಲಕರಿಗೆ ಮುಂಚೂಣಿಯಲ್ಲಿ ನಿಲ್ಲಲು ಅವಕಾಶವನ್ನೇ ಕೊಡಲಿಲ್ಲ.

ಪಿಯುಸಿ ಪರೀಕ್ಷೆಯ ಫಲಿತಾಂಶವೂ ಇದಕ್ಕಿಂತ ಭಿನ್ನವಲ್ಲ. ಈ ದಶಕದಲ್ಲೇ ಅತ್ಯಧಿಕ ಫಲಿತಾಂಶ (ಶೇಕಡಾ 57) ಈ ಸಲ ಬಂದಿದೆ. ಮೊದಲ ಸಲ ಪರೀಕ್ಷೆಗೆ ಕುಳಿತ ವಿದ್ಯಾರ್ಥಿನಿಯರಲ್ಲಿ ಶೇಕಡಾ 74ರಷ್ಟು ಉತ್ತೀರ್ಣರಾಗಿದ್ದರೆ, ಬಾಲಕರಲ್ಲಿ ಉತ್ತೀರ್ಣ ಪ್ರಮಾಣ ಶೇಕಡಾ 54.58 ಮಾತ್ರ! ಮಾತ್ರವಲ್ಲ, ಕಲೆ, ವಿಜ್ಞಾನ, ವಾಣಿಜ್ಯ ಮೂರೂ ವಿಭಾಗಗಳಲ್ಲಿ ಅಗ್ರಸ್ಥಾನವನ್ನು ಗಳಿಸಿದವರೂ ಹುಡುಗಿಯರೇ. ಅಂದರೆ ಹುಡುಗಿಯರು ಹುಡುಗರಿಗಿಂತ ಹೆಚ್ಚು ಶ್ರಮಜೀವಿಗಳು ಮತ್ತು ಬುದ್ಧಿವಂತರು ಎನ್ನುವುದು ಸ್ಪಷ್ಟ.

ಸಾಮಾನ್ಯವಾಗಿ ಎಲ್ಲ ಮನೆಗಳಲ್ಲೂ ಓದುವ ವಿಷಯದಲ್ಲಿ ಹೆತ್ತವರು, ಪೋಷಕರು ಹುಡುಗರ ಪರವಾಗಿಯೇ ಇರುತ್ತಾರೆ. ಮಗಳಾದರೆ ಮನೆಕೆಲಸ ಮಾಡಿಕೊಂಡು ಶಾಲೆ, ಕಾಲೇಜಿಗೆ ಓದಲು ಹೋಗಬೇಕು. ಅದೇ ಮಗನಾದರೆ, ‘ಓದಿಕೊಳ್ಳಲಿ ಬಿಡ್ರೀ.. ನಾಳೆ ಒಳ್ಳೆಯ ಕೆಲಸಕ್ಕೆ ಸೇರಿ ಸಂಪಾದನೆ ಮಾಡಿ ಕುಟುಂಬ ಅವನೇ ಸಾಕಬೇಕಲ್ಲ?’ ಎನ್ನುವುದು ಪೋಷಕರ ವರಸೆ. ಮಗಳು ಶಾಲೆಗೆ ಹೋಗಲು ಸೈಕಲ್ ಕೇಳಿದರೆ ‘ನಡ್ಕೊಂಡು ಹೋಗು’ ಎನ್ನುವ ಪೋಷಕರೇ, ಗಂಡು ಮಗನಿಗೆ ಮುಂದೆ ಬಿದ್ದು ಬೈಕ್ ಕೊಡಿಸುವುದಿದೆ. ಗ್ರಾಮೀಣ ಪ್ರದೇಶದಲ್ಲಂತೂ ಓದುವ ಹೆಣ್ಣುಮಕ್ಕಳು ಅನುಭವಿಸುವ ಸಂಕಷ್ಟಗಳು ಇನ್ನೂ ಹೆಚ್ಚು. ಎಲ್ಲ ಕಷ್ಟಗಳನ್ನು ಎದುರಿಸಿಯೂ ಈ ಹುಡುಗಿಯರು ಶೈಕ್ಷಣಿಕ ಸಾಧನೆಗಳಲ್ಲಿ ಮುಂಚೂಣಿಯಲ್ಲಿ ಇರುತ್ತಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಸದಾ ಕಾಲ ಮೇಲುಗೈ ಸಾಧಿಸುತ್ತಾರೆ. ತಮ್ಮಲ್ಲಿ ಅದ್ಭುತ ಪ್ರತಿಭೆ ಅಡಗಿದೆ ಎನ್ನುವುದನ್ನು ಪದೇ ಪದೇ ಸಾಬೀತು ಪಡಿಸುತ್ತಾರೆ.

ಆದರೆ ಪಿಯುಸಿ ಮುಗಿದ ಮೂರು ವರ್ಷಗಳ ಬಳಿಕ ಬರುವ ಅಂತಿಮ ಪದವಿ ಪರೀಕ್ಷೆಯ ಫಲಿತಾಂಶದ ವೇಳೆಗೆ ಈ ಹೆಣ್ಣು ಮಕ್ಕಳ ದಾಖಲೆಗಳು ಮಂಕಾಗುತ್ತವೆ. ಪರೀಕ್ಷೆಗೆ ಕುಳಿತವರ ಪಟ್ಟಿ ನೋಡಿದರೆ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗಿರುತ್ತದೆ. ಫಲಿತಾಂಶದ ಪಟ್ಟಿಯಲ್ಲೂ ಮುಂಚೂಣಿಯಲ್ಲಿ ಗಂಡುಮಕ್ಕಳ ಹೆಸರು ಮಿಂಚುತ್ತಿರುತ್ತದೆ. ಅಷ್ಟೊಂದು ಪ್ರತಿಭಾವಂತರಾಗಿದ್ದ ಹುಡುಗಿಯರೆಲ್ಲ ಎಲ್ಲಿ ಹೋಗುತ್ತಾರೆ?

‘ಮೂದೇವಿ ಓದಿ ಆಗಬೇಕಾದದ್ದು ಏನಿದೆ? ಈಗಲೇ ಮರದೆತ್ತರ ಬೆಳೆದಿದ್ದಾಳೆ. ಎಲ್ಲಾದರೂ ಒಂದು ಗಂಡು ನೋಡ್ರಿ. ಬೇಗ ಮನೆಯಿಂದ ಹೊರಗೆ ಹಾಕಿಬಿಡೋಣ’ ಎನ್ನುವುದು ನಮ್ಮ ಗ್ರಾಮೀಣ ಪ್ರದೇಶದ ಅಮ್ಮಂದಿರ ಜನಪ್ರಿಯ ಡೈಲಾಗು. ನಗರದ ಪ್ರದೇಶದಲ್ಲಿ ಈ ಮಾತಿನ ಶೈಲಿ ಸ್ವಲ್ಪ ಬದಲಾಗಬಹುದು, ಆದರೆ ಗುರಿ ಮಾತ್ರ ಬದಲಾಗುವುದಿಲ್ಲ. ಬೆಳೆದ ಹೆಣ್ಣುಮಕ್ಕಳನ್ನು ಅವರೆಷ್ಟೇ ಪ್ರತಿಭಾವಂತರಾದರೂ ‘ಬೇಗ ಮದುವೆ ಮಾಡಿಸಿ ಗಂಡನ ಮನೆಗೆ ಕಳಿಸಿದರೆ ಸಾಕು’ ಎನ್ನುವುದು ಬಹುತೇಕ ಪೋಷಕರ ಅಂಬೋಣ. ನಗರ ಪ್ರದೇಶದಲ್ಲಿ ಇವತ್ತು ಪದವಿ ಮುಗಿಸುವ ಮತ್ತು ಕೆಲಸಕ್ಕೆ ಸೇರುವ ಹುಡುಗಿಯರ ಸಂಖ್ಯೆ ಹೆಚ್ಚಾಗಿದೆ ಎನ್ನುವುದು ನಿಜ. ಆದರೆ ಅದಕ್ಕೂ ಕಾರಣ ಮದುವೆಗೆ ಗಂಡು ಹುಡುಕುವ ಜರೂರತ್ತೇ! ‘ಓದಿ ಕೆಲಸದಲ್ಲಿದ್ದರೆ ವರದಕ್ಷಿಣೆಯ ಭಾರ ಇಲ್ಲದೆ ಮಗಳನ್ನು ಮದುವೆ ಮಾಡಿಸಬಹುದು’ ಎನ್ನುವುದು ಪೋಷಕರ ದೂರಾಲೋಚನೆ. ಅರ್ಥ ಸ್ಪಷ್ಟ: ನಮ್ಮ ಸಮಾಜದಲ್ಲಿ ಹೆಣ್ಣಿನ ಪ್ರತಿಭೆಗೆ ಬೆಲೆ ಇಲ್ಲ. ಆಕೆ ಏನಿದ್ದರೂ ಮದುವೆಯಾಗಿ, ಸಂಸಾರದ ನೊಗ ಹೊತ್ತು, ಮಕ್ಕಳನ್ನು ಹೆತ್ತು ಮನೆಯಲ್ಲೇ ಇರಬೇಕಾದವಳು.

ಪದವಿ ಮುಗಿಸಿದ ಬಳಿಕವೂ ಸಂಶೋಧನಾ ಕ್ಷೇತ್ರಕ್ಕೆ ಹೋಗುವವರಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯೇ. ‘ತುಂಬಾ ಹೆಚ್ಚು ಓದಿಸಿದರೆ ಅಷ್ಟೇ ಓದಿದ ಸೂಕ್ತ ಗಂಡು ಸಿಗುವುದಿಲ್ಲ’ ಎನ್ನುವುದು ಇನ್ನೊಂದು ಸಬೂಬು. ಈ ಪ್ರವೃತ್ತಿ ಎಂದು ಬದಲಾಗಬಹುದು? ಹೆಣ್ಣಿನ ಪ್ರತಿಭೆಗೆ ಗಂಡಿನ ಪ್ರತಿಭೆಗೆ ಸಿಗುವಷ್ಟೇ ಮರ್ಯಾದೆ, ಗೌರವ ಸಿಗುವ ದಿನಗಳು ಶೀಘ್ರ ಬರಬಹುದೆ?

■ ಬಿ.ಎಂ.ಹನೀಫ್

